**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**S.C. No.** 268/2021

**ಸಾಕ್ಷಿಯನ್ನು ದಿನಾಂಕ** 11.9.2025 **ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ನಾಗರಾಜು ಅಲಿಯಾಸ್ ಕುರಕುರೆ | ಪಿ.ಡಬ್ಲ್ಯೂ-9 |
| ತಂದೆಯ/ಗಂಡನ ಹೆಸರು | : | ಲೇಟ್ ಸಣ್ಣಯ್ಯ | ಸಿ.ಡಬ್ಲ್ಯೂ-15 |
| ವಯಸ್ಸು | : | 26 | |
| ಉದ್ಯೋಗ | : | ಗಾರೆ ಕೆಲಸ | |
| ವಾಸ ಸ್ಥಳ | : | ಮೂಗೂರು, ಟಿ.ನರಸೀಪುರ ತಾಃ | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ಮೃತ ಭಾಗ್ಯಲಕ್ಷ್ಮಿ ನನ್ನ ದೊಡ್ಡಪ್ಪನ ಮಗಳಿರುತ್ತಾಳೆ. ಪೂಜಾಶ್ರೀ ಮತ್ತು ಶ್ರೇಯಸ್ ಭಾಗ್ಯಲಕ್ಷ್ಮಿಯವರ ಮಕ್ಕಳಿರುತ್ತಾರೆ. ಚಾಸ8 ಮಾದಯ್ಯ ನನ್ನ ದೊಡ್ಡಪ್ಪ. ನನಗೆ ಚಾಸ2 ಮಹದೇವಸ್ವಾಮಿಯವರ ಪರಿಚಯವಿದೆ. ನ್ಯಾಯಾಲಯದ ಮುಂದಿರುವ ಆರೋಪಿ ಮಹೇಶಕುಮಾರ್ ನಮ್ಮ ಗ್ರಾಮದವನಿರುತ್ತಾನೆ. ಮೃತ ಭಾಗ್ಯಲಕ್ಷ್ಮಿಯನ್ನು ನಮ್ಮ ಗ್ರಾಮದ ಮಹದೇವ ಎಂಬುವವರಿಗೆ ಮದುವೆ

ಮಾಡಲಾಗಿತ್ತು. ಮಹದೇವ ಲಾರಿ ಚಾಲಕನ ಕೆಲಸ ಮಾಡುತ್ತಿದ್ದು ಊಟಿಗೆ ಕೆಲಸಕ್ಕೆ ಹೋಗುತ್ತಿದ್ದ. ಮಹದೇವ ಡ್ರಿಂಕ್ಸ ಮಾಡುತ್ತಿದ್ದರಿಂದ ಭಾಗ್ಯಲಕ್ಷ್ಮಿ ಮರಣ ಹೊಂದುವ 3–4 ವರ್ಷಗಳ ಮೊದಲು ತನ್ನ ಮಕ್ಕಳೊಂದಿಗೆ ತನ್ನ ತಂದೆ ಮನೆಗೆ ಬಂದು ವಾಸವಿದ್ದರು. ಆ ಮನೆಯಲ್ಲಿ ಚಾಸ8 ಮಾದಯ್ಯ, ಭಾಗ್ಯಲಕ್ಷ್ಮಿ ಮತ್ತು ಭಾಗ್ಯಲಕ್ಷ್ಮಿಯ ಮಕ್ಕಳಾದ ಪೂಜಾಶ್ರೀ ಮತ್ತು ಶ್ರೇಯಸ್ ವಾಸವಿದ್ದರು. ನನ್ನ ದೊಡ್ಡಮ್ಮ ಅಂದರೆ ಚಾಸ8 ರವರ ಹೆಂಡತಿ ಮರಣ ಹೊಂದಿರುತ್ತಾರೆ. ಭಾಗ್ಯಲಕ್ಷ್ಮಿ ಮೈಸೂರಿನ ಗಾರ್ಮೆಂಟ್ಸನಲ್ಲಿ ಕೆಲಸ ಮಾಡುತ್ತಿದ್ದರು. ಭಾಗ್ಯಲಕ್ಷ್ಮಿಯವರ ಮಗಳಾದ ಪೂಜಾಶ್ರೀ ನರ್ಸಿಂಗ್ ಓದುತ್ತಿದ್ದಳು. ಈಗ್ಗೆ 4 ವರ್ಷದ ಹಿಂದೆ ಒಂದು ದಿನ ನಾನು ಕೂಲಿ ಮಾಡಿಕೊಂಡು ಬಂದು ಮನೆಯಲ್ಲಿ ಮಲಗಿದ್ದೆ. ಆ ಕಾಲಕ್ಕೆ ರಾತ್ರಿ 9 ಗಂಟೆಯಲ್ಲಿ ಶ್ರೇಯಸ್ ನನಗೆ ಫೋನ್ ಮಾಡಿ ನನ್ನ ತಾಯಿ ವಾಕಿಂಗ್ ಹೋಗಿದ್ದವರು ಕಾಣುತ್ತಿಲ್ಲ ಎಂದು ಹೇಳಿದ. ಆಗ ನಾನು ಅವರ ಮನೆ ಬಳಿ ಹೋದೆ. ಆಗ ಶ್ರೇಯಸನನ್ನು ವಿಚಾರಿಸಿದಾಗ ಮಮ್ಮಿ ವಾಕಿಂಗ್ ಹೋದವರು ಬಂದಿಲ್ಲ ಎಂದು ಹೇಳಿದ. ಆಗ ನಾನು, ನನ್ನ ದೊಡ್ಡಪ್ಪ ಮತ್ತು ಶ್ರೇಯಸ್ ಸೇರಿಕೊಂಡು ಹೊಸಹಳ್ಳಿ ಕಾಲುವೆ ರಸ್ತೆಯಲ್ಲಿ ಹುಡುಕಾಡಿದೆವು. ಭಾಗ್ಯಲಕ್ಷ್ಮಿ ಅದೇ ರಸ್ತೆಗೆ ವಾಕಿಂಗ್ ಹೋಗುತ್ತಿದ್ದರಿಂದ ಅಲ್ಲಿ ಹುಡುಕಾಡಲು ಹೋಗಿದ್ದೆವು. ಆ ಕಾಲಕ್ಕೆ ಭಾಗ್ಯಲಕ್ಷ್ಮಿ ಸಿಗಲಿಲ್ಲ. ನಾವು ಮನೆಗೆ ವಾಪಸ್ ಬಂದೆವು. ನಂತರ ಬೆಳಿಗ್ಗೆ ನಾನು ಪುನಃ ನನ್ನ ದೊಡ್ಡಪ್ಪನ ಮನೆ ಬಳಿ ಹೋಗಿ ಶ್ರೇಯಸ್ ನನ್ನು ಬಂದರಾ ಎಂದು ವಿಚಾರಿಸಿದೆ. ಅವರು ಸಿಕ್ಕಿಲ್ಲ ಎಂದು ಹೇಳಿದರು.

ನಂತರ ನಾನು, ನನ್ನ ದೊಡ್ಡಪ್ಪ ಹಾಗೂ ಶ್ರೇಯಸ್ ಪುನಃ ಕಾಲುವೆ ರಸ್ತೆಯಲ್ಲಿ ಹುಡುಕಾಡಿದೆವು. ಆಗಲೂ ಸಹ ಭಾಗ್ಯಲಕ್ಷ್ಮಿ ಸಿಗಲಿಲ್ಲ. ಪುನಃ ಮನೆಗೆ ವಾಪಸ್ ಹೋಗಿದ್ದೆವು. ಆ ದಿನ ಮಧ್ಯಾಹ್ನ 3-4 ವೇಳೆಯಲ್ಲಿ ಶ್ರೇಯಸ್‌ಗೆ ಆತನ ಸ್ನೇಹಿತರು ಫೋನ್ ಮಾಡಿ ಕಾಲುವೆ ಬಳಿ ನಿನ್ನ ತಾಯಿಯ ಮೃತದೇಹ ಸಿಕ್ಕಿದೆ ಎಂದು ಹೇಳಿದರು. ಆ ಕಾಲಕ್ಕೆ ನಾನು, ನನ್ನ ದೊಡ್ಡಪ್ಪ, ಪೂಜಾ ಮತ್ತು ಶ್ರೇಯಸ್ ಕಾಲುವೆ ಬಳಿ ಹೋಗಿ ನೋಡಿದಾಗ ಕಾಲುವೆ ಪೈಪ್ ಒಳಗೆ ಭಾಗ್ಯಲಕ್ಷ್ಮಿಯ ಮೃತದೇಹ ಇತ್ತು. ನಾವು ನೋಡಿದಾಗ ಭಾಗ್ಯಲಕ್ಷ್ಮಿಯ ತಲೆ, ತೊಡೆ ಮತ್ತು ಕುತ್ತಿಗೆಗೆ ಗಾಯವಾಗಿತ್ತು. ಶವದ ಮೇಲೆ ಒಂದು ಗೋಣಿಚೀಲ ಇತ್ತು. ಆ ಕಾಲಕ್ಕೆ ಬೇರೆ ಯಾವುದೇ ವಸ್ತುವನ್ನು ನೋಡಿರುವುದಿಲ್ಲ.

ಆ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ. ನಂತರ ಆರೋಪಿ ಮಹೇಶ ಭಾಗ್ಯಲಕ್ಷ್ಮಿಯನ್ನು ಕೊಲೆ ಮಾಡಿರುತ್ತಾನೆ ಎಂದು ಪೋಲಿಸರು ಹೇಳಿದ್ದರಿಂದ ಗೊತ್ತಾಯಿತು. ಆದರೆ ಯಾವ ಕಾರಣಕ್ಕೆ ಕೊಲೆ ಮಾಡಿರುತ್ತಾನೆ ಎಂದು ಗೊತ್ತಿಲ್ಲ. ಇಷ್ಟನ್ನು ಮಾತ್ರ ನಾನು ಪೋಲಿಸರಿಗೆ ಹೇಳಿರುತ್ತೇನೆ. ನಾನು ಠಾಣೆಗೆ 2 ಬಾರಿ ಹೋಗಿರುತ್ತೇನೆ. ಆರೋಪಿಯು ಭಾಗ್ಯಲಕ್ಷ್ಮಿಯ ಜೊತೆ ಚನ್ನಾಗಿದ್ದ ಬಗ್ಗೆ ಗೊತ್ತಿಲ್ಲ. ಆರೋಪಿಯು ಭಾಗ್ಯಲಕ್ಷ್ಮಿಯನ್ನು ಯಾವ ಕಾರಣಕ್ಕೆ ಕೊಲೆ ಮಾಡಿರುತ್ತಾನೆ ಎಂದು ಗೊತ್ತಾಗಿಲ್ಲ. ನಾನು ನೋಡಿದಾಗ ಭಾಗ್ಯಲಕ್ಷ್ಮಿಯ ಶವದ

ಮೇಲಿದ್ದ ಗೋಣಿಚೀಲ ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ಎಂಓ 7 ಆ ಗೋಣಿಚೀಲ ಇದೆ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ, ಪರಿಶೀಲಿಸಿ ಸಕಾರಣಗಳಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

25.8.2021 ರಂದು ರಾತ್ರಿ ವೇಳೆಯಲ್ಲಿ ನಾವು ಭಾಗ್ಯಲಕ್ಷ್ಮಿಯನ್ನು ಹುಡುಕಲು ಹೋದಾಗ ನಮ್ಮ ಜೊತೆ ಚಾಸ 2 ಮಹದೇವಸ್ವಾಮಿ ಅಲಿಯಾಸ್ ದ್ವಾರಕಿ ಸಹ ಬಂದಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೋಲಿಸರ ಮುಂದೆ "ನಮ್ಮ ಸಂಬಂಧಿಕರಾದ ಮಹದೇವಸ್ವಾಮಿ ---------------------- -------------------- ಹುಡುಕಾಡಿದೆವು" ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ40 ಎಂದು ಗುರುತಿಸಿದೆ. ಸಾಕ್ಷಿ ಸ್ವತಃ ಹೇಳುತ್ತಾರೆ ಮರುದಿನ ಚಾಸ 2 ಮಹದೇವಸ್ವಾಮಿ ಅಲಿಯಾಸ್ ದ್ವಾರಕಿ ನಮ್ಮ ಜೊತೆ ಹುಡಕಲು ಬಂದಿದ್ದರು. ಶವವನ್ನು ನೋಡಿದಾಗ ಭಾಗ್ಯಲಕ್ಷ್ಮಿಯ ನೈಟಿ ಮೇಲಕ್ಕೆ ಎತ್ತಿಕೊಂಡಿದ್ದರಿದಿಂದ ನಾನು ಭಾಗ್ಯಲಕ್ಷ್ಮಿಯ ಮನೆಗೆ ಹೋಗಿ ರಗ್ಗು ಮತ್ತು ಲುಂಗಿಯನ್ನು ತಂದು ಹೊದಿಸಿದ್ದೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು "ನನ್ನ ಅಕ್ಕ ಭಾಗ್ಯಲಕ್ಷ್ಮಿಯ ---------------------------------

ಹೊದಿಸಿದೆನು" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ40 ಎ ಎಂದು ಗುರುತಿಸಿದೆ. ಭಾಗ್ಯಲಕ್ಷ್ಮಿಯ ಶವವಿದ್ದ ಸ್ವಲ್ಪ ದೂರದಲ್ಲಿ ಅವರ ಛತ್ರಿ ಮತ್ತು ಚಪ್ಪಲಿಗಳು ಬಿದಿದ್ದವು ಮತ್ತು ಅಲ್ಲಲ್ಲಿ ರಕ್ತದ ಕಲೆ ಇದ್ದವು ಎಂದರೆ ನಾನು ನೋಡಿಲ್ಲ. ಈ ಬಗ್ಗೆ "ಭಾಗ್ಯಲಕ್ಷ್ಮಿ ಶವ ದೊರೆತ ------------------------------------ ಕಂಡು ಬಂದಿತ್ತು" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ40 ಬಿ ಎಂದು ಗುರುತಿಸಿದೆ.

ನ್ಯಾಯಾಲಯದ ಮುಂದಿರುವ ಆರೋಪಿಯು ಭಾಗ್ಯಲಕ್ಷ್ಮಿಯ ಮಗಳಾದ ಪೂಜಾಶ್ರೀಯನ್ನು ಪ್ರೀತಿಸುತ್ತಿದ್ದು ಆ ಬಗ್ಗೆ ಗೊತ್ತಾಗಿ ಭಾಗ್ಯಲಕ್ಷ್ಮಿಯು ಪೂಜಾಶ್ರೀಗೆ ಬುದ್ದಿ ಹೇಳಿ ಇನ್ನು ಮುಂದೆ ಅವರ ಜೊತೆ ಮಾತನಾಡುವುದಿಲ್ಲ ಎಂದು ಭಾಷೆ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂತರ ಪೂಜಾಶ್ರೀ ಕಾಲೇಜಿಗೆ ಹೋಗುವಾಗ ಆರೋಪಿ ಅವಳನ್ನು ಮಾತನಾಡಿಸಲು ಪ್ರಯತ್ನ ಮಾಡಿದ್ದು ಗೊತ್ತಾಗಿ ಭಾಗ್ಯಲಕ್ಷ್ಮಿಯು ಅವನನ್ನು ಕಂಡಾಗಲೆಲ್ಲಾ ಸೂಳೆ ಮಗನೇ ಮಾನ ಮರ್ಯಾದೆ ಇಲ್ಲವಾ, ನನ್ನ ಮಗಳನ್ನು ಪಾಲೋ ಮಾಡುತ್ತಿಯಾ ಎಂದು ಮುಂತಾಗಿ ಬೈಯುತ್ತಿದ್ದಳು ಎಂದರೆ ನನಗೆ ಗೊತ್ತಿಲ್ಲ. ಆ ಕಾಲಕ್ಕೆ ಆರೋಪಿಯು ಪೂಜಾಶ್ರೀಗೆ ನಿನ್ನ ತಾಯಿ ನನ್ನ ಪ್ರೀತಿಗೆ ಅಡ್ಡಿಪಡಿಸುತ್ತಿದ್ದಾರೆ ಒಂದಲ್ಲ ಒಂದು ದಿನ ನಿಮ್ಮ ತಾಯಿಗೆ ಗತಿ ಕಾಣಿಸದೇ ಬಿಡುವುದಿಲ್ಲ ಎಂದು ಹೇಳಿದ್ದನ್ನು ಪೂಜಾಶ್ರೀ ನನಗೆ ತಿಳಿಸಿದ್ದಳು ಎಂದರೆ ಸರಿಯಲ್ಲ.

ದಿನಾಂಕ 31.8.2021 ರಂದು ಪೋಲಿಸರು ಆರೋಪಿತನನ್ನು ದಸ್ತಗಿರಿ ಮಾಡಿದಾಗ ಭಾಗ್ಯಲಕ್ಷ್ಮಿಯು ಬೈಯುತ್ತಿದ್ದ ಕಾರಣಕ್ಕೆ ಆರೋಪಿಯು ಅವಳ ಮೇಲೆ ದ್ವೇಷ ಇಟ್ಟುಕೊಂಡಿದ್ದು ದಿನಾಂಕ 25.8.2021 ರಂದು ಸಂಜೆ 6.20 ಕ್ಕೆ ಆರೋಪಿಯು ಸೈಕಲಿನಲ್ಲಿ ಗದ್ದೆ ಕೆಲಸಕ್ಕೆ ಹೋಗುವಾಗ ರಸ್ತೆ ಪಕ್ಕದ ಪೊದೆಯಲ್ಲಿ ಟಾಯ್ಲೆಟಿಗೆ ಕುಳಿತ್ತಿದ್ದ ಭಾಗ್ಯಲಕ್ಷ್ಮಿಯು ಆರೋಪಿಯನ್ನು ಕುರಿತು ಬೈಯಲು ಪ್ರಾರಂಭಿಸಿದಾಗ ಆರೋಪಿ ಈಕೆಗೆ ಈ ದಿನ ಒಂದು ಕಾಣಿಸಬೇಕೆಂದು ಯೋಚಿಸಿ ಸೈಕಲ್ ಹಿಂದೆ ಸಿಕ್ಕಿಸಿದ್ದ ಗುದ್ದಲಿಯನ್ನು ತೆಗೆದುಕೊಂಡು ಅವಳ ತಲೆಗೆ ಹೊಡೆದಾಗ ಭಾಗ್ಯಲಕ್ಷ್ಮಿ ಪೊದೆಗೆ ಬಿದ್ದಿದ್ದು ಆಗ ಪುನಃ ಅದೇ ಗುದ್ದಲಿಯಿಂದ ಮುಖ, ತಲೆ, ಗದ್ದ ಮತ್ತು ಕಣ್ಣಿನ ಭಾಗಕ್ಕೆ ಹೊಡೆದು ನಂತರ ಶವವನ್ನು ಬೇರೆ ಕಡೆ ಸಾಗಿಸುವ ಉದ್ದೇಶದಿಂದ ಮನೆಗೆ ಹೋಗಿ ಒಂದು ಗೋಣಿಚೀಲ ತಂದು  ಭಾಗ್ಯಲಕ್ಷ್ಮಿಯ ಶವವನ್ನು ಗೋಣಿಚೀಲದಲ್ಲಿ ಹಾಕಿ ಕಾಲುವೆಯ ಸೇತುವೆಯ ಪೈಪಿನ ಒಳಗೆ ಹಾಕಿ ಮರೆ ಮಾಚಿದ್ದಾಗಿ ತಪ್ಪು ಒಪ್ಪಿಕೊಂಡ ಬಗ್ಗೆ ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಈ ಬಗ್ಗೆ "ನಮ್ಮ ಊರಿನ ನಮ್ಮ ಜನಾಂಗದವನೇ ಆದ ------------------------------

ನಂತರ ಗೊತ್ತಾಯಿತು" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.  ಸದರಿ ಹೇಳಿಕೆಯನ್ನು ನಿಪಿ41 ಎಂದು ಗುರುತಿಸಿದೆ. ಈ ದಿನ ಆರೋಪಿ ಮಹೇಶಕುಮಾರ ಜೊತೆ ನ್ಯಾಯಾಲಯದ ಹೊರಗಡೆ ಮಾತನಾಡಿದ್ದೇನೆ ಎಂದರೆ ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ತಿಂಡಿ ತಿಂದೆಯಾ ಎಂದು ಮಾತ್ರ ಮಾತನಾಡಿರುತ್ತೇನೆ.  ಆರೋಪಿ ನಮ್ಮ

ಊರಿನವನಾದ್ದರಿಂದ ಆತನ ಪರಿಚಯ ಇದೆ. ಈ ದಿನ ಆರೋಪಿಯನ್ನು ನ್ಯಾಯಾಲಯಕ್ಕೆ ಕರೆತಂದಾಗ ಆರೋಪಿ ಹೇಳಬೇಡ ಎಂದು ಸನ್ನೆ ಮಾಡಿದ್ದರಿಂದ ನಾನು ಆರೋಪಿ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಎ ವಕೀಲರಿಂದಃ

ನಾನು ನಿನ್ನೆ ಮತ್ತು ಈ ದಿನ ಮಾತ್ರ ನ್ಯಾಯಾಲಯಕ್ಕೆ ಬಂದಿರುತ್ತೇನೆ. ನಾನು ಶ್ರೇಯಸ್ ಜೊತೆ ನ್ಯಾಯಾಲಯಕ್ಕೆ ಬಂದಿರುತ್ತೇನೆ. ಶ್ರೇಯಸ್ ನ್ಯಾಯಾಲಯದಲ್ಲಿ ಈ ರೀತಿ ಸಾಕ್ಷಿ ನುಡಿಯಬೇಕೆಂದು ನನ್ನನ್ನು ಕರೆ ತಂದಿರುತ್ತಾನೆ ಎಂದರೆ ನಿಜ. ನಾನು ಗಾರೆ ಕೆಲಸ ಅಲ್ಲದೇ ಜಮೀನಿನಲ್ಲಿ ಕೂಲಿ ಕೆಲಸ ಸಹ ಮಾಡುತ್ತೇನೆ. ನಾನು ಚಾಸ 2 ಮಹದೇವಸ್ವಾಮಿ ಜೊತೆ ಕಬ್ಬು ಕಟಾವು ಕೆಲಸಕ್ಕೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ಚಾಸ 2 ಮಹದೇವಸ್ವಾಮಿ ನನ್ನ ಸಂಬಂಧಿಕನಲ್ಲ. ಚಾಸ 2 ಮಹದೇವಸ್ವಾಮಿಗೆ ಮದುವೆಯಾಗಿ ಮಕ್ಕಳಿವೆ ಎಂದರೆ ನಿಜ. ಭಾಗ್ಯಲಕ್ಷಿಯ ಮನೆಯಿಂದ 3 ಮನೆ ಬಳಿಕ ನಮ್ಮ ಮನೆ ಇದೆ ಎಂದರೆ ನಿಜ. ಚಾಸ 2 ಮಹದೇವಸ್ವಾಮಿ ಭಾಗ್ಯಲಕ್ಷಿಯ ಜೊತೆ ಅಕ್ರಮ ಸಂಬಂಧ ಹೊಂದಿದ್ದ ಎಂದರೆ ಗೊತ್ತಿಲ್ಲ. ಮಹದೇವಸ್ವಾಮಿಯೇ ಭಾಗ್ಯಲಕ್ಷಿಯ ಮನೆಯನ್ನು ಮೆಂಟೇನ್ ಮಾಡುತ್ತಿದ್ದ ಎಂದರೆ ಗೊತ್ತಿಲ್ಲ. ಅವರಿಬ್ಬರ ಅಕ್ರಮ ಸಂಬಂಧ ವಿಚಾರ ಗೊತ್ತಾಗಿ ಊರಿನಲ್ಲಿ ಪಂಚಾಯಿತಿ ನಡೆದಿತ್ತು ಎಂದರೆ ಗೊತ್ತಿಲ್ಲ. ಆ ಪಂಚಾಯಿತಿ ಕಾಲಕ್ಕೆ ಆರೋಪಿತ ಅವರ ಅಕ್ರಮ ಸಂಬಂಧಕ್ಕೆ ವಿರೋಧ ವ್ಯಕ್ತಪಡಿಸಿದ್ದ ಎಂದರೆ ಗೊತ್ತಿಲ್ಲ. ಆ ಕಾರಣಕ್ಕೆ ಮಹದೇವಸ್ವಾಮಿಗೆ ಆರೋಪಿಯ

ಮೇಲೆ ದ್ವೇಷ ಇತ್ತು ಎಂದರೆ ಗೊತ್ತಿಲ್ಲ. ಮೃತ ಭಾಗ್ಯಲಕ್ಷ್ಮಿಯು ಟಿ.ನರಸೀಪುರದ ನ್ಯಾಯಾಲಯದಲ್ಲಿ ಡೈವೋರ್ಸ್ ಕೇಸು ಹಾಕಿರುತ್ತಾರೆ ಎಂದರೆ ಗೊತ್ತಿಲ್ಲ. ಭಾಗ್ಯಲಕ್ಷ್ಮಿಯ ಗಂಡ ಊಟಿಯಲ್ಲಿ ಚಾಲಕ ಕೆಲಸ ಮಾಡುತ್ತಾರೆ. ಮಹದೇವಸ್ವಾಮಿಯ ಅಕ್ರಮ ಸಂಬಂಧದ ಬಗ್ಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ನನ್ನ ಹೇಳಿಕೆ ಪಡೆದಿದ್ದಾರೆ, ಅವರ ಹೆಸರು ಗೊತ್ತಿಲ್ಲ. ಹೇಳಿಕೆ ನೀಡಿದ ದಿನಾಂಕ ಗೊತ್ತಿಲ್ಲ. ಶ್ರೇಯಸ್‌ನ ಹೇಳಿಕೆಯಂತೆ ಈ ದಿನ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮತ್ತು ಪೂಜಾಶ್ರೀ ಪರಸ್ಪರ ಪ್ರೀತಿ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ. ಅವರಿಬ್ಬರ ಮದುವೆಗೆ ಚಾಸ 2 ಮಹದೇವಸ್ವಾಮಿ ವಿರೋಧಿಸಿದ್ದ ಎಂದರೆ ಗೊತ್ತಿಲ್ಲ. ಆ ವಿಚಾರಕ್ಕೆ ಪಂಚಾಯಿತಿ ನಡೆದಿತ್ತು ಎಂದರೆ ಗೊತ್ತಿಲ್ಲ. ನಾನು ಘಟನೆ ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು